**ಸಾಕ್ಷಿಯನ್ನು ದಿಃ 15.03.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಆರ್.ಎನ್ ವಕೀಲರಿಂದಃ**

ಕ್ಯಾತಮಾನರನಹಳ್ಳಿಯ ಯಾವುದೇ ಸರ್ವೇ ನಂಬರ್ ನಲ್ಲಿ ನಮ್ಮ ಸಂಸ್ಥೆಯ ಲೇಔಟ್ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ ಸರ್ವೇ ನಂ 54 ಮತ್ತು 56 ಜಮೀನುಗಳು ಯರಗನಹಳ್ಳಿಯಲ್ಲಿ ಇರುತ್ತದೆ. ವಾದಿ ಯಾವ ಸರ್ವೇ ನಂಬರ್ ಬಗ್ಗೆ ದಾವೆ ಹೂಡಿರುತ್ತಾರೆ ಗೊತ್ತಿಲ್ಲ. ಕ್ಯಾತಮಾನರಹಳ್ಳಿ ಸರ್ವೇ ನಂ. 176 ರಲ್ಲಿ 4 ಎಕರೆ 13 ಗುಂಟೆಗೆ ಈ ದಾವೆ ಹಾಕಿದ್ದು ನನಗೆ ಗೊತ್ತು ಎಂದರೆ ನಿಜ. ಈ ದಾವೆಯ ವಿದ್ಯಾಮಾನಗಳು ಗೊತ್ತಿರುತ್ತವೆ. ಈ ದಾವ ಹಾಕಿದ ಮೇಲೆ ಕ್ಯಾತಮಾರನಹಳ್ಳಿ ಗ್ರಾಮ ನಕಾಶೆಯಲ್ಲಿ ತೆಗೆಸಿ ನೋಡಿಲ್ಲ. ಈ ದಾವ ವಾದ ಪತ್ರ ವಿಷಯ ಗೊತ್ತು ಕ್ಯಾತಮಾರನಹಳ್ಳಿ ದಾವ ಆಸ್ತಿ ಪೂರ್ವದ ಗಡಿಯಲ್ಲಿ ಇದೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 54 ಮತ್ತು 56 ಜಮೀನುಗಳು ಯರಗನಹಳ್ಳಿ ಗ್ರಾಮದ ಗಡಿಯ ಪಶ್ಚಿಮದಲ್ಲಿ ಇದೆ ಎಂದರೆ ಗೊತ್ತಿಲ್ಲ. ಈ ವಿಷಯ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ನಿಪಿ.4 ನಕಾಶೆ ನೋಡಿರುತ್ತೇನೆ. ಆ ಪ್ರಕಾರ ಸದರಿ ಜಮೀನುಗಳು ಯರಗನಹಳ್ಳಿಯ ಪಶ್ಚಿಮಕ್ಕೆ ಇದೆ ಎಂದರೆ ನಿಜ. ಯರಗನಹಳ್ಳಿ ಗ್ರಾಮದ ನಕಾಶೆ ನಿಪಿ. 6 ನೋಡಿರುತ್ತೇನೆ. ನಿಪಿ. 6 ರಲ್ಲಿ ಸರ್ವೇ ನಂ. 53, 54 ಮತ್ತು 56 ರ ಪಶ್ಚಿಮದ ಗಡಿ ರೇಖೆ ನೇರವಾಗಿದೆ ಎಂದರೆ ನಿಜ. ನನಗೆ ರೆವಿನ್ಯೂ ದಾಖಲೆಗಳನ್ನು ನೋಡಿದರೆ ಗೊತ್ತಾಗುತ್ತದೆ. ನಿಪಿ. 5 ರ ಪ್ರಕಾರ ಕ್ಯಾತಮಾರನಹಳ್ಳಿ ಸರ್ವೇ ನಂ. 175 ರಿಂದ 177 ಪೂರ್ವದ ಗಡಿ ರೇಖೆ ನೇರವಾಗಿದೆ. ಯರಗನಹಳ್ಳಿ ಉತ್ತರಕ್ಕೆ ಸಾತಗಳ್ಳಿ ಗ್ರಾಮ ಬರುತ್ತದೆ ಎಂದರೆ ಗೊತ್ತಿಲ್ಲ. ನಿಪಿ. 6 ರಲ್ಲಿ ಯರಗನಹಳ್ಳಿ ಸರ್ವೇ ನಂ. 56 ಉತ್ತರದ ಗಡಿ ಪಶ್ಚಿಮ ಭಾಗದಲ್ಲಿ ಸಾತಗಳ್ಳಿ ಗ್ರಾಮ ಇದೆ ಎಂದರೆ ನಿಜ. ಸಾತಗಳ್ಳಿ ಗ್ರಾಮದ ಗಡಿಯ ದಕ್ಷಿಣಕ್ಕೆ ಯರಗನಹಳ್ಳಿ ಸರ್ವೇ ನಂ. 56 ಮತ್ತು 57 ಬರುತ್ತದೆ ಎಂದರೆ ನಿಜ. ನಿಪಿ. 4 ಕ್ಕೆ ವಾದಿ ಮತ್ತು 10 ನೇ ಪ್ರತಿವಾದಿ ಒಪ್ಪಿಗೆ ಕೊಟ್ಟಿಲ್ಲ ಹಾಗೂ ಅವರಿಂದ

ಎನ್.ಓ.ಸಿ ಪಡೆದಿಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ. ನಿಪಿ. 4 ರಲ್ಲಿ ಸೈಟ್ ನಂ. 1 ರ ಪಶ್ಚಿಮಕ್ಕೆ ಕ್ಯಾತಮಾರನಹಳ್ಳಿಯವರ ನಿವೇಶನ, ದಕ್ಷಿಣಕ್ಕೆ ಏನಿದೆ ಎಂದು ನೆನಪಿಲ್ಲ. ಸೈಟ್ ನಂ. 19 ರ ಉತ್ತರಕ್ಕೆ ಏನಿದೆ ಎಂದು ನೆನಪಿಲ್ಲ. ನಿಪಿ. 4 ರ 80 ಅಡಿ ರಸ್ತೆಯ ಪಶ್ಚಿಮಕ್ಕೆ ಯರಗನಹಳ್ಳಿ ಸರ್ವೇ ನಂ. 54 ಮತ್ತು 56 ಬರುವುದಿಲ್ಲ ಎಂದರೆ ಸುಳ್ಳು. ಸೈಟ್ ನಂ. 1 ರಿಂದ 19 ರ ಪಶ್ಚಿಮಕ್ಕೆ ಏನು ಇದೆ ಎಂದರೆ ಕ್ಯಾತಮಾರನಹಳ್ಳಿ ಗ್ರಾಮದ ನಿವೇಶನಗಳು ಬರುತ್ತವೆ ಎಂದು ಹೇಳುತ್ತಾರೆ. ಸರ್ವೇ ನಂ. 176 10 ನೇ ಪ್ರತಿವಾದಿಗೆ ಸೇರುತ್ತದೆ. ಓ.ಎಸಿ 117/91 ರಲ್ಲಿ 10 ನೇ ಪ್ರತಿವಾದಿ ಈ ಬಗ್ಗೆ ಕ್ರಯಪತ್ರ ಹಾಜರು ಪಡಿಸಿದ್ದರು.. ನಿಪಿ. 1 ಸದರಿ ಕ್ರಯಪತ್ರದ ದಾಖಲೆ ಎಂದರೆ ನೆನಪಿಲ್ಲ. ನನ್ನ ಬಳಿ ಕ್ರಯ ಪತ್ರದ ಪ್ರತಿ ಇಲ್ಲ. ಯಾವ ವರ್ಷದ ಕ್ರಯಪತ್ರ ಎಂದು ನೆನಪಿಲ್ಲ. ಆ ಸಮಯದಲ್ಲಿ 10 ನೇ ಪ್ರತಿವಾದಿಯ ವಯಸ್ಸು ಎಷ್ಟು ಎಂದು ಗೊತ್ತಿಲ್ಲ. ಓ.ಎಸ್ 117/91 ರಲ್ಲಿ ಹಾಗೂ ಓ.ಎಸ್ 289/96 ರಲ್ಲಿ ಸಣ್ಣಮ್ಮ ಪಕ್ಷಗಾರರಲ್ಲ. ಈ ಮೊದಲು ಆಗಿದ್ದ ಕಮೀಷನರ್ ವರದಿ ಮತ್ತು ನಕಾಶೆ ಸರಿಯಾಗಿಲ್ಲ, ವಾಸ್ತವಾಂಶಕ್ಕೆ ವಿರುದ್ಧವಾಗಿ ಅಲ್ಲಿ ಯಾವುದೇ ಅಳತೆ ಆಗಿಲ್ಲ, ನನ್ನ ಹೇಳಿಕೆಯಂತೆ ಮತ್ತು ಕಮೀಷನರ್ ರವರಿಗೆ ವಸೂಲಿ ಮಾಡಿ ಬರೆಸಿಕೊಂಡಿದ್ದೆ ಎಂದರೆ ಸುಳ್ಳು. ಸದರಿ ವರದಿ ಮತ್ತು ಈ ದಾವೆಗೆ ಸಂಬಂಧ ಇಲ್ಲ ಎಂದರೆ ಸುಳ್ಳು. ಹೊಸದಾಗಿ ಕಮೀಷನರ್ ನೇಮಕ ಆಗಲು ತೊಂದರೆ ಇಲ್ಲ. ವಾದಿಯ ದಾವ ಆಸ್ತಿ ಹಕ್ಕು ಸ್ವತಂತ್ರವಾಗಿದ್ದು 10 ನೇ ಪ್ರತಿವಾದಿ ಕೈಕೆಳಗೆ ಇಲ್ಲ ಎಂದರೆ ಗೊತ್ತಿಲ್ಲ. ನಾವು ಲೇಔಟ್ ಮಾಡುವಾಗ ದಾವ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದು ಅದನ್ನು ಮರೆಮಾಚಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

ಸಹಿ/-

ಪ್ರಧಾನ **ಲಘು ವ್ಯವಹಾರಗಳ ಮತ್ತು ಸಿವಿಲ್**
**ನ್ಯಾಯಾಧೀಶರು (ಹಿಂ.ವಿ.), ಮೈಸೂರು**